**<u>ಸಾಕ್ಷಿಯನ್ನು ದಿಃ 07.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಸ್.ಎನ್ ವಕೀಲರಿಂದಃ-</u>**

ನನ್ನ ವಯಸ್ಸು 65 ಆಗಿರುತ್ತದೆ. ನಾನು ಬಿ.ಎ ಪದವೀದರ. ಮೊದಲು ನಾನು ಹೊಟೇಲ್ ನಡೆಸುತ್ತಿದ್ದು, ಈಗ ನಾನು ಏನು ಮಾಡುತ್ತಿಲ್ಲ. ನಾನು ವಾಸ ಇರುವಂತಹ ವಿಳಾಸ ನಂ. 1887/2 ಎ 1, ಬಿ.ಎಂ. ರೋಡ್, ಹುಣಸೂರು. ನಾನು 1997 ರಲ್ಲಿ ನಾವು ವಿಭಾಗ ಮಾಡಿಕೊಂಡಿದ್ದು, ಆಗಿನಿಂದಲೂ ಪ್ರತ್ಯೇಕವಾಗಿ ಸದರಿ ವಿಳಾಸದಲ್ಲಿ ವಾಸ ಇದ್ದೇನೆ. ಮೇಲೆ ಹೇಳಿದ ವಿಳಾಸವನ್ನು ಹೊರತು ಪಡಿಸಿ ಬೇರೆ ಯಾವುದೆ ವಿಳಾಸವನ್ನು ಎಲ್ಲಿಯೂ ನೀಡಿಲ್ಲ. ಹಾಗೆನಾದರೂ ಒಂದು ವೇಳೆ ನೀಡಿದ್ದರೆ ಅದು ಸುಳ್ಳು ಮಾಹಿತಿ ಎಂದು ಒಪ್ಪಿಕೊಳ್ಳುತ್ತೇನೆ.

ಅರ್ಜಿದಾರರಾದ ನಂದಿನಿ ರವರು ನನ್ನ ತಮ್ಮನ ಹೆಂಡತಿ ಅಲ್ಲದ ನಮ್ಮ ಅಕ್ಕನ ಮಗಳು ಆಗಬೇಕು. ನಾನು ಮತ್ತು ಅರ್ಜಿದಾರರು ಒಂದೆ ಕಡೆ ವಾಸ ಇರುವಂತಹದ್ದು ಎಂದರೆ ಸರಿಯಲ್ಲ, ಪ್ರತ್ಯೇಕವಾಗಿ ವಾಸ ಇದ್ದೇವೆ. ಅರ್ಜಿದಾರರು ಬೇರೆ ವಾಸ ಇರುವುದರಿಂದ ಅವರು ಯಾವುದೆ ತೀರ್ಮಾನ ತೆಗೆದುಕೊಳ್ಳಲು ಸಂಪೂರ್ಣವಾಗಿ ಸ್ವತಂತ್ರವಾಗಿರುತ್ತಾರೆ ಎಂದರೆ ಸರಿ. ಅವರು ಬೇರೆ ವಾಸ ಇರುವುದರಿಂದ ಅವರ ಮನೆಯನ್ನು ಅವರ ಇಚ್ಚಾನುಸಾರ ರಿಪೇರಿ ಮಾಡಿಸಿಕೊಳ್ಳಲು ತಕರಾರು ಇಲ್ಲ ಎಂದರೆ ಸಾಕ್ಷಿ ನನಗೆ ತೊಂದರೆ ಕೊಡದ ಹಾಗೆ ಮಾಡಿಕೊಳ್ಳಬೇಕು ಎನ್ನುತ್ತಾರೆ.

ಈ ಅರ್ಜಿಯಲ್ಲಿ ನಾನು 2 ಬಾರಿ ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ತಕರಾರನ್ನು ಸಲ್ಲಿಸಲು ಮಾಹಿತಿಯನ್ನು ನಾನೆ ಕೊಟ್ಟಿರುತ್ತೇನೆ. 2 ನೇ ಬಾರಿ ಸಲ್ಲಿಸಿದ ತಕರಾರನ್ನು ನಾನೆ ತಯಾರಿಸಿದ್ದೇನೆ ಎಂದರೆ ಸಾಕ್ಷಿ ವಕೀಲರಿಗೆ ಹೇಳಿ ಅವರೆ ತಯಾರಿಸಿದ್ದರು ಎನ್ನುತ್ತಾರೆ. ನಾನು ಸಲ್ಲಿಸಿದ ತಕರಾರನ್ನು ವಕೀಲರು ತಯಾರಿಸಿಲ್ಲ ನಾನೆ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ತಯಾರಿಸಿದ ನಂತರ ಅದರಲ್ಲಿ ಏನೆಲ್ಲಾ ಮಾಹಿತಿ ಇದೆ ಎಂದು

ತಿಳಿದುಕೊಂಡಿದ್ದೇನೆ. ಸುಳ್ಳು ಅಂಶಗಳನ್ನು ಸೃಷ್ಟಿಸಿಕೊಂಡು ತಕರಾರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ತಕರಾರನ್ನು ನನ್ನ ಒಬ್ಬನ ಪರವಾಗಿ ಸಲ್ಲಿಸಿರುತ್ತೇನೆ. 2 ನೇ ಎದುರುದಾರರ ಪರವಾಗಿ ಸಲ್ಲಿಸಿರುವುದಿಲ್ಲ. 1977 ರಲ್ಲಿ ಭಾಗವಾದ ನಂತರ ಅವರವರ ಭಾಗದ ಸ್ವತ್ತನ್ನು ಅವರವರೆ ಅನುಭವಿಸಿಕೊಂಡು ಬರುತ್ತಿದ್ದೇವೆ ಎಂದರೆ ಸರಿ.

ಗಂಡ ತೀರಿಕೊಂಡರೆ ಸ್ವತ್ತಿಗೆ ಸಂಬಂಧಿಸಿದಂತೆ ಹೆಂಡತಿ ಮತ್ತು ಮಕ್ಕಳ ಹೆಸರಿನಲ್ಲಿ ಪೌತಿ ಖಾತೆ ಆಗುತ್ತದೆಎಂದರೆ ಸರಿ. ಅರ್ಜಿದಾರರ ಗಂಡ ಮಾಲ್ತೇಶ್ ರವರು ಗಣಪತಿ ಎಂಬುವವರ ಕಡೆಯಿಂದ ಸ್ವತ್ತನ್ನು ಖರೀದಿ ಮಾಡಿದ್ದರು ಎಂದರೆ ಸರಿ. ಮಾಲ್ತೇಶ್ ರವರು ಮರಣದ ನಂತರ ಹಾಗೆ ಖರೀದಿ ಮಾಡಿದ ಸ್ವತ್ತಿನ ಖಾತೆಯನ್ನು ಅರ್ಜಿದಾರರು ಪೌತಿ ಖಾತೆ ಮಾಡಿಸಿಕೊಳ್ಳಲು ಅವಕಾಶ ಕೊಡಲಿಲ್ಲ ಎಂದರೆ ಸರಿ. ಸಾಕ್ಷಿ ಪುನಃ ಪೌತಿ ಖಾತೆ ಆಗಬೇಕಾದರೆ ಹೆಚ್ಚಿನ ವಿಸ್ತೀರ್ಣವನ್ನು ತೋರಿಸಿದ್ದರಿಂದ ತಕರಾರು ಮಾಡಲಾಗಿತ್ತು ಎನ್ನುತ್ತಾರೆ. ಕ್ರಯ ಪತ್ರವನ್ನು ನಾನು ನೋಡಿದ್ದೇನೆ. ಕ್ರಯ ಪತ್ರದ ಪ್ರಕಾರ ಅವರು ಖರೀದಿ ಮಾಡಿದ್ದು 150X30 ಅಡಿಯಲ್ಲಿ ಎಂದರೆ ಸರಿ. ಕ್ರಯ ಪತ್ರದಲ್ಲಿ ನಮೂದಿಸಿದಂತೆ ಮಾಲ್ತೇಶ್ ರವರ ಜೀವಿತಾ ಕಾಲದಲ್ಲಿ ಖಾತೆ ಅವರ ಹೆಸರಿನಲ್ಲಿ 150X30 ಆಗೆ ಇತ್ತು ಎಂದರೆ ಸಾಕ್ಷಿ ಖಾತೆಯಲ್ಲಿ ಅಳತೆ ಕಡಿಮೆ ಇತ್ತು ಎನ್ನುತ್ತಾರೆ. ಖಾತೆಯಲ್ಲಿ 30 ಅಡಿ ಕಡಿಮೆ ಇತ್ತು. ಅಂತಹ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ. ಮಾಲ್ತೇಶ್ ರವರ ಜೀವಿತಾ ಕಾಲದಲ್ಲಿ ಅವರ ಹೆಸರಿನಲ್ಲಿ 150X30 ಅಡಿ ವಿಸ್ತೀರ್ಣಕ್ಕೆ ಖಾತೆ ಇತ್ತು ಎಂದರೆ ಸರಿಯಲ್ಲ.

ಅರ್ಜಿದಾರರ ಗಂಡ ಮಾಲ್ತೇಶ್ ರವರು ಅನಾರೋಗ್ಯದಿಂದ ಬಳಲುತ್ತಿದ್ದರು ಎಂದರೆ ಸರಿ. ಮನೆಯ ಯಜಮಾನರೆ ಅನಾರೋಗ್ಯಕ್ಕಿಡಾದರೆ ಆರ್ಥಿಕ ಸಮಸ್ಯೆ ಉಂಟಾಗುತ್ತದೆ ಎಂದರೆ ಸಾಕ್ಷಿ ಅವರು ಹಾಗೆ ಸೃಷ್ಟಿಸಿಕೊಂಡಿರುತ್ತಾರೆ, ಅದಕ್ಕೂ ನನಗೂ ಸಂಬಂಧ ಇಲ್ಲ ಎನ್ನುತ್ತಾರೆ. ಮಾಲ್ತೇಶ್ ರವರ ಭಾಗಕ್ಕೆ ಬಂದಂತಹ ಸ್ವತ್ತನ್ನು ಮಾರಾಟ ಅಥವಾ ಭೋಗ್ಯ ಮಾಡಲು ನಾವು ತೊಂದರೆ ಕೊಡುತ್ತಿದ್ದೇವು ಎಂದರೆ ಸರಿಯಲ್ಲ. 2018

ರಂದು ನಾವು ಅರ್ಜಿದಾರರ ಗಂಡ ಗಂಡನ ಮೇಲೆ ಏಕಾಏಕಿ ಹಲ್ಲೆ ಮಾಡಿ ಕಲ್ಲು ಎತ್ತಿಹಾಕಿ ಸಾಯಿಸುವ ಪ್ರಯತ್ನ ಮಾಡಿದ್ದೆ ಎಂದರೆ ಸರಿಯಲ್ಲ. ಅದನ್ನು ಅರ್ಜಿದಾರರು ಬಿಡಿಸಲು ಬಂದಾಗ ಅವರಿಗೂ ಹಲ್ಲೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರ ಮತ್ತು ಅವರ ಕುಟುಂಬದ ಮೇಲೆ 3-4 ದಾವೆ ಇರಬಹುದು. ಅಂತಹ ದಾವೆಗಳಲ್ಲಿ ಕೆಲವು ಇನ್ನು ಪೆಂಡಿಂಗ್ ಇರುತ್ತವೆ, ಇನ್ನು ಕೆಲವು ಮುಕ್ತಾಯ ಗೊಂಡಿರುತ್ತೇವೆ. ಓ.ಎಸ್ 22/2019, ಓ.ಎಸ್ 191/2019 ತೀರ್ಮಾನ ಆಗಿರುತ್ತದೆ. ಓ.ಎಸ್ 242/2017 ಇನ್ನು ಪೆಂಡಿಂಗ್ ಇರುತ್ತದೆ. ಇನ್ನು 2 ಹಳೆಯ ಕೇಸ್ ಗಳು ಇವೆ, ನನಗೆ ಜ್ಞಾಪಕ ಇಲ್ಲ. ಅವುಗಳು ನನ್ನ ಪರವಾಗಿ ತೀರ್ಮಾನ ಆಗಿರುತ್ತವೆ. ಎಲ್ಲಾ ಕೇಸ್ ಗಳು ವಿಚಾರಣೆ ಆಗಿಯೆ ತೀರ್ಮಾನ ಆಗಿರುತ್ತದೆ.

ಮೈಸೂರಿನ ಅಪೊಲೊ ಆಸ್ಪತ್ರೆಯಲ್ಲಿ 15 ದಿನ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ, ಅಂತಹ ದಾಖಲೆ ನನ್ನ ಬಳಿ ಇದೆ. 2019 ರಲ್ಲಿ ಮಾಲ್ತೇಶ್ ರವರು ತೀರಿಕೊಂಡಿರಬಹುದು. ನನ್ನ ತಂದೆ ಹೆಸರು ಮಲ್ಲಪ್ಪ, ತಾತನ ಹೆಸರು ಸಜ್ಜೆ ಮಲ್ಲೇಗೌಡ. ದಿಃ 20.02.1989 ರಂದು ನಮ್ಮ ತಂದೆ ಮಾಲ್ತೇಶ್ ಮತ್ತು ರಂಗಮಲ್ಲಯ್ಯ ರವರ ಹೆಸರಿಗೆ ಮಾಡಿದ ವಿಲ್ ಇದೆ ಎಂದರೆ ಸರಿ. ಸದರಿ ವಿಲ್ ನ ಜರಾಕ್ಸ್ ಪ್ರತಿಯನ್ನು ನೋಡಿ ಗುರುತಿಸಿದ್ದು ಅದರ ಅಸಲು ಅಥವಾ ದೃಡೀಕೃತ ಪ್ರತಿಯನ್ನು ಹಾಜರು ಪಡಿಸುವ ಮೇರೆಗೆ ನಿಪಿ. 65 ಎಂದು ಗುರುತಿಸಲಾಯಿತು. 2018 ರಲ್ಲಿ ನಾವು ಮಾಲ್ತೇಶ್ ರವರಿಗೆ ಹೊಡೆದ ಕಾರಣ ಅವರು ಇನ್ನು ಹೆಚ್ಚಿನ ಅನರೋಗ್ಯಕ್ಕೆ ಈಡಾದರು ಎಂದರೆ ಸರಿಯಲ್ಲ. 2018 ರಲ್ಲಿ ಅರ್ಜಿದಾರರೆ ನನಗೆ , ನನ್ನ ಮಗ ಮತ್ತು ಸೊಸೆಗೆ ಹೊಡೆದರು ಎಂಬ ಬಗ್ಗೆ ದೂರು ಕೊಟ್ಟಿರುತ್ತೇವೆ. ಅಂತಹ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಯಾವುದೆ ದಾಖಲೆ ಹಾಜರು ಪಡಿಸದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ದಿಃ 18.03.2018 ರಲ್ಲಿ ದೂರು ಕೊಟ್ಟಿದ್ದೆ. ಸದರಿ ದೂರು ನನಗೆ ಸಂಬಂಧಿಸಿದಲ್ಲ ಅದನ್ನು ಅರ್ಜಿದಾರರೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ತಾಯಿಗೆ ಅರ್ಜಿದಾರರು ಮತ್ತು ಅವರ ಗಂಡ ಸೇರಿ ತೊಂದರೆ ಕೊಡುತ್ತಿದ್ದರು ಎಂದು ಸುಳ್ಳು ಹೇಸುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನಡೆಸುತ್ತಿದ್ದ ಹೋಟೆಲ್ ಅನ್ನಪೂರ್ಣ ಹೋಟೆಲ್ ಆಗಿರುತ್ತದೆ. ಹೋಟಲ್ ಗೆ ಸಂಬಂಧ ಪಟ್ಟ ಸಾಮಾನುಗಳನ್ನು ಅಂದರೆ ರುಬ್ಬುವ ಯಂತ್ರ ಇತ್ಯಾದಿಗಳನ್ನು ಮನೆಯಲ್ಲೆ ಇಟ್ಟುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ರುಬ್ಬುವ ಯಂತ್ರವನ್ನು ಮನೆಯಲ್ಲಿ ಇಟ್ಟುಕೊಂಡು ಬೆಳಿಗ್ಗೆ 4.00 ಗಂಟೆಗೆ ರುಬ್ಬುತ್ತಿದ್ದ ಕಾರಣ ನನ್ನ ತಂದೆ ತಾಯಿಗೆ ನಿದ್ರೆ ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ತಕರಾರಿನೊಂದಿಗೆ ದಾಖಲೆಗಳನ್ನು ಕೊಟ್ಟಿದ್ದರಿಂದ ಅದನ್ನು ನಿಪಿ.1 ಎಂದು ಗುರುತಿಸಲಾಗಿದೆ ಎಂದು ತಕರಾರಿನಲ್ಲಿ ಹೇಳಿದ್ದೇನೆ. ಸದರಿ ದಾಖಲೆಯನ್ನು ನಾನು ಹಾಜರು ಪಡಿಸಿಲ್ಲ, ಅದನ್ನು ಅರ್ಜಿದಾರರು ಹಾಜರು ಪಡಿಸಿದ್ದರು ಎಂದರೆ ಸರಿಯಲ್ಲ.

ಸರ್ವೆ ನಂ. 95/2 ರ ಖಾತಾ ಎಕ್ಸ್ಟ್ರಾಕ್ಟ್ ಅನ್ನು ನಾನು ನೋಡಿದ್ದೆ. ಯಾವ ವರ್ಷದ್ದು ಎಂದು ಈಗ ನನಗೆ ನೆನಪಿಲ್ಲ. ಸರ್ವೆ ನಂ. 95/2 ರಲ್ಲಿ 2013 ರ ವರೆಗೂ ಮಾಲ್ತೇಶ್ ರವರ ಹೆಸರಿನಲ್ಲಿ 150X30 ಅಡಿ ಎಂದು ಅಳತೆ ನಮೂದಾಗಿದೆ ಎಂದರೆ ಅದು ತಪ್ಪಾಗಿರುತ್ತದೆ ಎನ್ನುತ್ತಾರೆ. ಅರ್ಜಿದಾರರ ಹೆಸರಿಗೆ ಪೌತಿ ಖಾತೆ ಆಗಬಾರದು ಎಂದು ಸುಳ್ಳು ಮಾಹಿತಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಸಿವಿಲ್ ದಾವೆ ಹೂಡಿದ್ದೆ ಎಂದರೆ ಸರಿ. ಸದರಿ ದಾವೆ ತೀರ್ಮಾನ ಆಗಿದೆಯೋ ಅಥವಾ ಪೆಂಡಿಂಗ್ ಇರುತ್ತದೊ ಎಂದರೆ ಸಾಕ್ಷಿ ರಿಜೆಕ್ಟ್ ಆಗಿದೆ ಎನ್ನುತ್ತಾರೆ.

ನಮ್ಮ ಮನೆಯ ಮೇಲೆ ಸೋಲಾರ್ ಅಳವಡಿಸಲು ಪರವಾಣಿಗೆ ತೆಗೆದುಕೊಂಡಿರುತ್ತೇನೆ. ಅಂತಹ ದಾಖಲೆ ನನ್ನ ಬಳಿ ಇದೆ, ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ. ಸೋಲಾರ್ ತಂತಿ ಇರುವುದಿಲ್ಲ, ಅದು ವಿದ್ಯುತ್ ತಂತಿ ಎಂದರೆ ಸರಿಯಲ್ಲ. ಅದಕ್ಕೆ ಸೂಚನಾ ಫಲಕ ಇದೆ. ನಿಪಿ. 15 ರ ಫೋಟೊದಲ್ಲಿ ಕಾಣಿಸುವಂತೆ ಸೋಲರ್ ತಂತಿ ಅಳವಡಿಸಿಕೊಳ್ಳಲಾಗಿದೆ ಎಂದರೆ ಸರಿ. ಸದರಿ ಫೋಟೊದಲ್ಲಿ ಸೂಚನಾ ಫಲಕ ಇದೆಯಾ ಎಂದರೆ ಸಾಕ್ಷಿ ಬೇರೆ ಕಡೆ ಇದೆ ಎನ್ನುತ್ತಾರೆ. ನಗರ ಪ್ರದೇಶದಲ್ಲಿ ಆ ರೀತಿ ಸೋಲಾರ್ ತಂತಿ ಹಾಕಲು ಪರವಾಣಿಗೆ ನೀಡಿಲ್ಲ ಎಂದರೆ ಸಾಕ್ಷಿ ಕೊಟ್ಟಿದ್ದರು ಎನ್ನುತ್ತಾರೆ. ಆ ರೀತಿ ಯಾವುದೆ ಪರವಾಣಿಗೆ ಕೊಡದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಂತಿ ಬೇಲಿಯಲ್ಲಿ ಇರುವಂತಹ ಮರಗಳು ಯಾರಿಗೆ ಸೇರಿದ್ದು

ಎಂದು ಪೋಟೊ ತೋರಿಸಿ ಕೇಳಲಾಗಿ, ಸಾಕ್ಷಿ ಗೊತ್ತಾಗುತ್ತಿಲ್ಲ ಎನ್ನುತ್ತಾರೆ. ಮನೆಯ ಸುತ್ತ ಮರಗಳನ್ನು ಬೆಳೆಸಿದರೆ ಹಾವು, ಬೇಡವಾದ ಹುಳುಗಳು ಮನೆಯ ಒಳಗೆ ಬರುತ್ತವೆ ಎಂದರೆ ಸರಿ. ಮನೆಯ ಸುತ್ತ ಅರ್ಜಿದಾರರು ಸ್ವಚ್ಛತೆ ಮಾಡಿಕೊಳ್ಳುವ ಸಮಯದಲ್ಲಿ ಗಲಾಟೆ ಮಾಡಿದ್ದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸೇರಿದ ಜಾಗದಲ್ಲಿ ಸ್ವಚ್ಛತೆ ಮಾಡಿಕೊಳ್ಳುವುದಕ್ಕೆ ನಾವು ಆಗಾಗ್ಗೆ ಗಲಾಟೆ ಮಾಡುತ್ತೇವೆ ಎಂದರೆ ಸರಿಯಲ್ಲ. ಆ ಜಾಗ ಎಲ್ಲರಿಗೂ ಸೇರಿದ್ದು ಎನ್ನುತ್ತಾರೆ. ಸದರಿ ಜಾಗ ಮಾಲ್ತೇಶ್ ರವರಿಗೆ ಮಾತ್ರ ಸೇರಿದ್ದು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.